## ■ ರೈತ ತೀರ್ಪು ಪುಸ್ತಕ ಬಿಡುಗಡೆ

ಮೈಸೂರು: ಕೃಷಿ ಸಂಶೋಧನೆಯ ಪ್ರಜಾ ತಾಂತ್ರೀಕರಣಕ್ಕಾಗಿ ದಕ್ಷಿಣ ಏಷ್ಯಾ ಒಕ್ಕೂಟವು (ಆದರ್ಶ) ಹೊರ ತಂದಿರುವ, ರೈತ ತೀರ್ಪು ಎಂಬ ಕೃಷಿ ಸಂಶೋಧನೆಯಲ್ಲಿ ಪ್ರಜಾತಾಂತ್ರೀಕರಣಕ್ಕಾಗಿ ಕರ್ನಾಟಕದಲ್ಲಿ ನಡೆದ ಒಂದು ಪ್ರಕ್ರಿಯೆಯ ವರದಿ– 2009 ಪುಸ್ತಕವನ್ನು ಕಬ್ಬು ಬೆಳೆಗಾರರ ಸಂಘ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಸೋಮವಾರ ಪತ್ರಕರ್ತರ ಭವನದಲ್ಲಿ ಬಿಡುಗಡೆಗೊಳಿಸಿದರು. ನಂತರ ಮಾತನಾಡಿ, ರಾಜ್ಯದಲ್ಲಿ ರೈತರ ಸಮಸ್ಯೆಗಳತ್ತ ಗಮನ ನೀಡುವಲ್ಲಿ ಸರ್ಕಾರ ವಿಫಲವಾಗಿದೆ. ಹಿಂದೆ ರಾಸಾಯನಿಕ ಗೊಬ್ಬರ ಉಪಯೋಗಿಸಲು ರೈತರಿಗೆ ಹೇಳಿದ ಸರ್ಕಾರ ಈಗ ಸಾವಯವ ಕೃಷಿ ಮಾಡಿ ಎನ್ನುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು. ರೈತ ತೀರ್ಪು ಪುಸ್ತಕವನ್ನು ಸಾವಯವ ಕೃಷಿಕ, ಬರಹಗಾರ ಸಂತೋಷ್ ಕೌಲಗಿ ಸಂಪಾದಿಸಿದ್ದಾರೆ. ಈ ರೈತ ತೀರ್ಪಿನ ಮಹತ್ವವನ್ನು ಕರ್ನಾಟಕ ಹಾಗೂ ಇತರೆ ರಾಜ್ಯಗಳ ರೈತ ಚಳವಳಿ ನಾಯಕರಿಗೆ ವಿವರಿಸುವಂತಹ ಕಾರ್ಯವನ್ನು ಒಕ್ಕೂಟವು ಕೈಗೊಳ್ಳಲಿದೆ. ಆದರ್ಶ ಸಂಚಾಲಕ ಪಿ.ವಿ. ಸತೀಶ್ ಹಾಗೂ ಕೆ.ಎನ್. ರಾಮಚಂದ್ರ ಇದ್ದರು.